(321)
T.P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 19-6-1968

ಪತ್ರಿಕೆಯ ಚಂದಾದಾರರಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ-ವರ್ಷಕ್ಕೆ ರೂ. 6

ಸತ್ಯವಾದಿ

ಸ್ಥಾಪಕರು : ಶರಾವತಿ ಚರ್ತ್ರೀಮತಿ ಎ. ಎ. ಶಾಮರಾವ್ ಪ್ರಕಾಶಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

Space available

For Permanent Advertisement

ಭಾರತಕ್ಕೆ ತಾಯ್ಲಾಂಡ್ ಅಕ್ಕಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಬ್ಲಿಸಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿಸಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ರೀ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವನಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಶ್ರೀ ಫಕ್ರುದ್ದಿ ಅಲಿ ಅಹಮದ್‌ರವರು

★

ಬೆಂಗಳೂರು— ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಫಕ್ರುದ್ದಿ ಅಲಿ ಅಹಮದ್‌ರವರು, ಕಾಂಗ್ರೆಸಿಗರನ್ನು ಕುರಿತು ಮಾಡಿದ ಭಾಷಣದಲ್ಲಿ— ಶಾಸನ ಸಭೆಗೆ ಚುನಾವಣೆಯಾಗಲು ಬಯಸುವ ಕಾಂಗ್ರೆಸಿಗರು 2-3 ವರ್ಷ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿರುವ ಯೋಗ್ಯತೆ ಹೊಂದಿರುವಂತೆ ಸಲಹೆ ಮಾಡಿದರು — ಅಧ್ಯಕ್ಷತೆ ವಹಿಸಿದ್ದ ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು, ಸರಕಾರ ಹೊಣಗಾರಿಕೆಯಲ್ಲಿನ ಮೈಸೂರು ರಾಜ್ಯದಲ್ಲಿ ಚಿಕ್ಕ ಕಾರು ತಯಾರಿಕೆ ಕಾರ್ಖಾನೆಗೆ ಅನುಮತಿ ನೀಡಲು ಮಂತ್ರಿಗಳನ್ನು ವಿನಂತಿಸಿದರು.

★

ಕಾರ್ಪೊರೇಷನ್ನಿಗೆ ಚುನಾವಣೆ

ಬೆಂಗಳೂರು— ರದ್ದು ಪಡಿಸಲಾಗಿರುವ ಬೆಂಗಳೂರು ಕಾರ್ಪೊರೇಷನ್ನಿಗೆ ಮತ್ತೆ ಚುನಾವಣೆ ನಡೆಸಲಾಗುವುದೆಂದೂ, ಕ್ಷೇತ್ರಗಳ ವಿಂಗಡನೆ, ಮತದಾರರ ಪಟ್ಟಿ ತಯಾರಿಕೆಗೆ ಸ್ವಲ್ಪ ಕಾಲಾವಕಾಶ ಅಗತ್ಯವೆಂದೂ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಬೆಂಗಳೂರು ಕಾರ್ಪೊರೇಷನ್ ಜಿಲ್ಲಾ ಕಾಂಗ್ರೆಸ್ ಸಮಿತಿ ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ತಿಳಿಸಿದರು.

★

ಪರೀಕ್ಷಾ ಫಲಿತಾಂಶ

ಮೈಸೂರು— ಏಪ್ರಿಲ್‌ನಲ್ಲಿ ನಡೆದ ಪ್ರೀ ಯೂನಿವರ್ಸಿಟಿ ಪರೀಕ್ಷೆ ಫಲಿತಾಂಶ ಜೂ ತಾ॥ 22, ಬೆಳಿಗ್ಗೆ 6 ಗಂಟೆಗೆ ಪ್ರಕಟಿಸಲಾಗುವುದು.

★

ಮಹಾಜಗದ್ಗುರು

ನವದೆಹಲಿ— ಹರಿಜನ ನಾಯಕ ಡೆಲಿಯ ಮಹಾರಾಜ್ ಗೋವಿಂದಗಿರಿಯವರು ಹರಿಜನರ ಮಹಾಜಗದ್ಗುರುಗಳಾಗಿ ಮಾಡಲ್ಪಟ್ಟರು — ಆಹಾರಮಂತ್ರಿ ಶ್ರೀ ಜಗಜೀವನ ರಾಂರ ನಾಯಕತ್ವದಲ್ಲಿ 50 ಲಕ್ಷ ಹರಿಜನರ ಸೇನಾ ಸ್ಥಾಪಿಸುವದು ಅವಶ್ಯವೆಂದು ಕೇಂದ್ರ ಉಪ ಆರೋಗ್ಯ ಮಂತ್ರಿ ಶ್ರೀ ಬಿ ಎಸ್ ಮೂರ್ತಿ ಹೇಳಿದರು.

★

ಮಹಿಳೆಯರಿಗೂ ಸ್ಥಾನ ಸಿಕ್ಕಲಿ

ಬೆಂಗಳೂರು— ಟ್ರೇಡ್ ಯೂನಿಯನ್‌ಗಳ ನಾಯಕತ್ವದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನವಿದ್ಯೆ ಕೊಡಬೇಕೆಂದು ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು ಟ್ರೇಡ್ ಯುನಿಯನ್‌ಗಳಿಗೆ ಕರೆಯಿತ್ತರು.

★ ಶ್ರೀನಗರ (ಗಾರವಾಲ್)—ವಿಪರೀತ ಚಳಿಯಿಂದ ಬದ್ರಿನಾಥಪುರಿಯಲ್ಲಿ ಐದು ಮಂದಿ ನಿಧನರಾದರು.

ರಾಜಶ್ರೀಗೆ ವಾರಂಟ್

ಬೊಂಬಾಯಿ— ತಾನು ಪಾತ್ರ ವಹಿಸಿದ್ದ ಚಿತ್ರಗಳು ಪೂರ್ತಿಗೊಳ್ಳುವುದಕ್ಕೆ ಮುಂಚೆ ತಾ॥ 12 ರಂದು ಫ್ರಾಂಕ್‌ಫರ್ಟ್‌ಗೆ ಹೊರಟುಹೋದ ಸಿನಿಮಾ ತಾರೆ ರಾಜಶ್ರೀಗೆ ಮೋಸದ ಆಪಾದನೆಗಾಗಿ ಜಾಮೀನುರಹಿತ ವಾರಂಟು, ಅವಳ ತಾಯಿ ಜಯಶ್ರೀಗೆ ಸಮನ್ಸನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊರಡಿಸಿದ್ದಾರೆ — ಚಿತ್ರ ನಿರ್ಮಾಪಕರಾದ ಶ್ರೀ ಗುನ್ಮಂಗ್ ನಾಯಕ್ ತನ್ನ ಚಿತ್ರ 'ದೀದಾರ್' ನಲ್ಲಿ ಪಾತ್ರವಹಿಸಲು ಈಕೆಗೆ ರೂ. 75000 ಪಾವತಿಮಾಡಿರುವ ವಾಗಿಯೂ, ತಾವು ಚಿತ್ರಕ್ಕಾಗಿ ರೂ. 20 ಲಕ್ಷ ಖರ್ಚಾಗಿದೆಯೆಂದೂ, ಚಿತ್ರ ಮುಗಿಸದಿದ್ದರೆ, ರೂ. 50 ಲಕ್ಷ ನಷ್ಟವಾಗುವ ದೆಂದೂ ಅರ್ಜಿಯಲ್ಲಿ ತಿಳಿಸಿರುವರು.

ಅಗ್ನಿಗೆ ಆಹುತಿ

ಮದರಾಸು— ಅಗ್ನಿಗೆ ಗುಡಿಸಲುಗಳು ಆಹುತಿಯಾಗುತ್ತಿರುವುದು ಪ್ರಾರಂಭವಾದ 6 ನೇ ದಿನವಾದ ನಿನ್ನೆ ಕೊಳಕು ಪ್ರದೇಶದಲ್ಲಿ 500 ಗುಡಿಸಲುಗಳು ಸುಟ್ಟು ಬೂದಿಯಾಯಿತು.

●

ಪ್ರತಿಭಟನಾ ಪ್ರದರ್ಶನ

ಮೈಸೂರು— ಸರಕಾರಿ ಸಾರಿಗೆ ಸಂಸ್ಥೆಗೆ ನೌಕರರನ್ನು ಸೇರಿಸುವ ವಿಷಯ ಸರಕಾರಿ ಕಾಲೇಜಿನಲ್ಲಿ ಭಾಷಣ ನಡೆಯುತ್ತಿದ್ದಾಗ, ಖಾಸಗಿ ಸಾರಿಗೆ ಕಂಪೆನಿಗಳ 500 ನೌಕರರು ಮೆರವಣಿಗೆಯಲ್ಲಿ ಬಂದು ಪ್ರದರ್ಶನ ನಡೆಸಿದರು.

★

ನವದೆಹಲಿ— ನಾಗಾಗಳಿಗೆ ಚೀನೀ ಶಸ್ತ್ರಾಸ್ತ್ರ ಸರಬರಾಜು ಮಾಡುವ ಮತ್ತು ಅವರಿಗೆ ತರಬೇತು ಕೊಡುವ ವಿಷಯದಲ್ಲಿ ಭಾರತವು ತೀವ್ರ ಪ್ರತಿಭಟನೆ ಸಲ್ಲಿಸಲಿದೆ.

ತಾಯ್ಲಾಂಡು ಅಕ್ಕಿ

ನವದೆಹಲಿ— ಸರ್ಕಾರೀ ಮಟ್ಟದಲ್ಲಿ ತಾಯ್ಲಾಂಡು ಸರಕಾರವು ಭಾರತಕ್ಕೆ 80000 ಟನ್ ಅಕ್ಕಿ ಸರಬರಾಜು ಮಾಡುವುದು.

★

ಕನ್ನಡ ಚಳವಳಿಗಾರರು

ಬೆಂಗಳೂರು— ರಾಜ್ಯಕ್ಕೆ ನೆರೆರಾಜ್ಯಗಳಲ್ಲಿನ ಕನ್ನಡ ಭಾಗಗಳ ಸೇರ್ಪಡೆಗಾಗಿ ಕನ್ನಡ ಚಳವಳಿಗಾರರು ವಿವಿಧ ಸ್ಥಳಗಳಲ್ಲಿ ಪ್ರದರ್ಶನ, ಬಹಿರಂಗಸಭೆ, ಬೈಠಕ್ ಮುಷ್ಕರ ನಡೆಸಲು ಯೋಜಿಸಿರುವರು — ಪಾರ್ಲಿಮೆಂಟು ಮುಂದೆಯೂ ಪ್ರದರ್ಶನ ನಡೆಸಲಾಗುವುದು.

★

ದೇವಾಲಯ ಪ್ರವೇಶದಲ್ಲಿ ಗೊಂದಲ

ಕೊಲಂಬೊ— ಜಾಫ್ನಾನ ಕಂದಸ್ವಾಮಿ ದೇವಾಲಯಕ್ಕೆ ಪೂಜೆಗೆ ಎಲ್ಲರೂ ಜುಲೈ 1 ರಿಂದ ಪ್ರವೇಶಿಸುಬಹುದಾಗಿದೆ — ಪ್ರವೇಶಕ್ಕೆ ಅಡ್ಡಿಪಡಿಸುವವರು ಪ್ರಾಸಿಕ್ಯೂಟು ಮಾಡಲ್ಪಡುವರೆಂದು ಪೋಲೀಸರು ಹೇಳಿಹ್ಹಾರೆ — ಕೀಳು ಕೋಮಿನವರಿಗೆ ದೇವಾಲಯಕ್ಕೆ ಪ್ರವೇಶವಿಲ್ಲವೆಂದು ದೇವಾಲಯದ ಆಡಳಿತಗಾರರ ಅಭಿಪ್ರಾಯ — ಜುಲೈ 1 ರಂದು ಈ ಬಗ್ಗೆ ಹೊಡೆದಾಟದ ನಿರೀಕ್ಷೆ ಇದೆ — ಉತ್ತಮ ಕೋಮಿನವರೂ, ಕೀಳುಕೋಮಿನವರೂ ಈ ವರೆಗೂ ಜಗ್ಗಲಾಸಿದ್ಧವಿಲ್ಲ!

★

ಬೆಂಕಿ ಹಾವಳಿ

ನವದೆಹಲಿ— ಟಾನೇರಾ ಭಾರುಕಟ್ಟೆಯಲ್ಲಿ ಅಗ್ನಿ ಅನಾಹುತದಿಂದ 10 ಕಾರುಗಳು, ಬಹಳ ದನಗಳ ಮೇವು, ಸುರಡಿದಿರ್ಮಿಗಳೂ, ಮರದ ಸಾಮಾನುಗಳೂ ಸುಟ್ಟುಹೋದವು.

(2)

ಭಕ್ತ ತುಳಸೀದಾಸ್

(ಮುಂದುವರಿದುದು)

ಈಗ ತುಳಸೀದಾಸನನ್ನು ಶ್ರೀ ರಾಮಚಂದ್ರನ ಪವಿತ್ರ ಪಾದಗಳಿಗಾಗಿ ಹೆಚ್ಚು ಆಸಕ್ತಿ ಒಂದು ಕಡೆ, ತಡೆಯಲಾರದ ಕಾಮ ಮತ್ತೊಂದು ಕಡೆ ಆ ಪರಿಸ್ಥಿತಿ. ಸ್ತ್ರೀಪ್ರಾಪ್ತಿಗೆ ಇಲ್ಲೀವರೆಗೆ ಅವನ್ನು ಕಟ್ಟುಪಾಡಿನಲ್ಲಿದ್ದ ಮುರಿಯಲಾರದ ಕಟ್ಟನ್ನು ಮುರಿಸಿತು : ತನ್ನ ಮಿಕ್ಕ ಜೀವಿತ ಕಾಲವನ್ನು ಭಗವಂತನ ಸೇವೆಗಾಗಿ ಹಾಗು ಯಶಸ್ವಿಯಾಗಿ ಕಳೆಯಬೇಕಾಯಿತೋ, ಆ ಭಗವಂತನನ್ನು ಹುಡುಕಲು ಸಂಸಾರದಿಂದ ಹೊರಡೂಡಿತು. ತುಳಸೀದಾಸನ ಹೆಂಡತಿ ಹೆಬ್ಬಾಗಿಲ ಮೂಲಕ ತಂದೆ ಮನೆಯನ್ನು ಪ್ರವೇಶಿಸಿದಳು : ತುಳಸೀದಾಸನು ಶ್ರೀ ರಾಮನನ್ನು ಹುಡುಕಲು ಹೊರಟ್ಟು, ಜನರ ಗಲಾಟೆಯಿಂದ ಬಿಡಿಸಿಕೊಂಡು, ದೂರದ ಒಂಟಿ ಚಿಕ್ಕ ಲೆಕ್ಕಿಸತಕ್ಕದ್ದಲ್ಲದ ಒಂದು ಅನಾಮಧೇಯ ಗ್ರಾಮದಲ್ಲಿ ನೆಲೆಸಿದನು.

ತುಳಸಿದಾಸನು ದಿನದ ಪ್ರಕೃತಿ ಕರ್ಮಗಳ ನಂತರ ಒಂದು ಮರದ ಕೆಳಗೆ ನಿರಿನಿಂದ ಶುಚಿಗೊಳಿಸಿಕೊಳ್ಳುತ್ತಿದ್ದನು. ಆ ಮರದ ಮೇಲಿದ್ದ ಒಂದು ಭೂತವು ಈ ಕೊಳಕು ನೀರಿನಿಂದ ತನ್ನ ಬಾಯಾರಿಕೆಯನ್ನು ಇಡಗಿಸಿಕೊಳ್ಳುತ್ತಿತ್ತು. ಒಂದು ದಿನ ಆ ಭೂತವು ತುಳಸೀದಾಸನ ಮುಂದೆ ನಿಂತು ' ನನ್ನ ತಡೆಯಲಾರದ ಬಾಯಾರಿಕೆಯನ್ನು ನಿವಾರಿಸಲು ನೀನು ನನಗೆ ಪ್ರತಿದಿನ ನೀರು ಒದಗಿಸುತ್ತಿರುವದಕ್ಕಾಗಿ ನಾನು ಕೃತಜ್ಞನಾಗಿರುತ್ತೇನೆ : ನನ್ನನ್ನು ಬೇಕಾದ ವರ ಕೇಳು ಕೊಡುತ್ತೇನೆ " ಎಂದಿತು.

[ಸಶೇಷ]

★

SHAKTI

SUDHA

A Superb Tonic



ಗೋರಕ್ಷಣೆ ಮುಖ್ಯ, ಪ್ರಾಣಿದಯಾ ಕಾರ್ಯಗಳು ಹೆಚ್ಚೆ ಚಾಲ್ತಿಗೆ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ಜನಪ್ರಿಯ 7ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ಪ್ರಾಣ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆ ಪೆರ— 14—6—68 ರಿಂದ

ಪದ್ಮಿನಿ ಪಿಕ್ಚರ್ಸ್‌ರವರ

ಕಿತ್ತೂರು ಚೆನ್ನಮ್ಮ

ಕನ್ನಡ

ನಿರ್ಮಾಪಕ, ನಿರ್ದೇಶನ : ಬಿ. ಆರ್. ಪಂತುಲು

Help The Gorakshana

ಗೋರಕ್ಷಣಾಕ್ಕೆ ಜೊಂಬಲು ನೀಡಿ

— ಗೋರಕ್ಷಣಾ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ದ್ರವ್ಯರೂಪದ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಜಂದಾವಾಯಿದೆಳೆದಿಂನವರು ಇವರಕ್ಷಿಸಜಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ಸಾಂತಯ್ಯಾಂಗ್, ಶ್ರೀ ಪಿ.ಎಸ್ ವಿಶ್ವನಾಥ್ ಜಯನಗರ ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಿ ಧರ್ಮಪ್ರಚಾರಸಭಾ ಹೊಂಗನೂರು 4
ಗೋರಕ್ಷಣಾ ಆಫೀಸು ಸಪ್ತಸ್ವರಾದಿ ಪ್ರೆಸ್ ಚಾಮರಾಜಪುರಂ ಮೈಸೂರು
ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4